Prepp
Your Personal Exams Guide

1. ಬಿಳಿ ಬಣ್ಣದ ಬೆಳಕನ್ನು ತ್ರಿಭುಜ ಪಟ್ಟಕದಲ್ಲಿ ಹಾಯಿಸಿದಾಗ, ಬೆಳಕು ವರ್ಣ ವಿಭಜನೆಗೊಂಡು ವಿವಿಧ ಬಣ್ಣಗಳು ಪಟ್ಟಕದ ತಳದಿಂದ ಈ ಕೆಳಗಿನ ಯಾವ ಅನುಕ್ರಮದಲ್ಲಿ ಇರುತ್ತವೆ ?
   (1) ನೇರಳೆ, ಇಂಡಿಗೋ, ಹಸಿರು, ನೀಲಿ, ಕಿತ್ತಳೆ, ಹಳದಿ, ಕೆಂಪು
   (2) ನೇರಳೆ, ಇಂಡಿಗೋ, ನೀಲಿ, ಹಸಿರು, ಹಳದಿ, ಕಿತ್ತಳೆ, ಕೆಂಪು
   (3) ಕೆಂಪು, ಹಳದಿ, ಕಿತ್ತಳೆ, ನೀಲಿ, ಹಸಿರು, ಇಂಡಿಗೋ, ನೇರಳೆ
   (4) ಕೆಂಪು, ಕಿತ್ತಳೆ, ಹಳದಿ, ಹಸಿರು, ನೀಲಿ, ಇಂಡಿಗೋ, ನೇರಳೆ

2. ಸಿಗರೇಟ್ ಸೇವನೆಯಿಂದ ಬರುವ ರೋಗಗಳು
   (1) ಕ್ಯಾನ್ಸರ್, ನೆಫ್ರೈಟಿಸ್, ಎಂಫೈಸಿಮಾ
   (2) ಎಂಫೈಸಿಮಾ, ರಕ್ತಹೀನತೆ, ಕ್ಯಾನ್ಸರ್
   (3) ಬ್ರಾಂಕೈಟಿಸ್, ರಕ್ತಹೀನತೆ, ಎಂಫೈಸಿಮಾ
   (4) ಎಂಫೈಸಿಮಾ, ಕ್ಯಾನ್ಸರ್, ಮುಕುಟಾಭಿದಮನಿ ಹೃದಯ ರೋಗಗಳು

3. ಅಂಗೈಗೆ ಹಾಕಿದ ಒಂದು ಹನಿ ಪೆಟ್ರೋಲ್ ಕೈಯಲ್ಲಿ ತಣ್ಣಗಿನ ಅನುಭವವನ್ನು ಉಂಟುಮಾಡುತ್ತದೆ. ಇದಕ್ಕೆ ಕಾರಣ
   (1) ಪೆಟ್ರೋಲ್‌ನ ತಾಪವು ಕಡಿಮೆಯಾಗುವುದರಿಂದ
   (2) ಪೆಟ್ರೋಲ್‌ನ ತಾಪವು ಹೆಚ್ಚಾಗಿರುವುದರಿಂದ
   (3) ಪೆಟ್ರೋಲ್ ಅಂಗೈಯಿಂದ ಉಷ್ಣವನ್ನು ಹೀರಿಕೊಳ್ಳುವುದರಿಂದ
   (4) ಪೆಟ್ರೋಲ್ ಉಷ್ಣವನ್ನು ಅಂಗೈಗೆ ಬಿಡುಗಡೆಗೊಳಿಸುವುದರಿಂದ

4. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.
   ಹೇಳಿಕೆ I : ಹೆಚ್ಚು ತಾಪವಿರುವ ವಸ್ತುವಿನಿಂದ ಕಡಿಮೆ ತಾಪವಿರುವ ವಸ್ತುವಿಗೆ ಉಷ್ಣವು ವರ್ಗಾವಣೆಯಾಗುತ್ತದೆ.
   ಹೇಳಿಕೆ II : ದ್ರವ ವಸ್ತುಗಳಲ್ಲಿ ಸಂವಹನದ ಮೂಲಕ ಉಷ್ಣದ ವರ್ಗಾವಣೆಯಾಗುತ್ತದೆ.
   ಈ ಕೆಳಗೆ ನೀಡಿರುವ ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.
   (1) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿಯಾಗಿವೆ.
   (2) ಹೇಳಿಕೆ I ಮತ್ತು ಹೇಳಿಕೆ II ಎರಡೂ ತಪ್ಪಾಗಿವೆ.
   (3) ಹೇಳಿಕೆ I ತಪ್ಪಾಗಿದೆ ಮತ್ತು ಹೇಳಿಕೆ II ಸರಿಯಾಗಿದೆ.
   (4) ಹೇಳಿಕೆ I ಸರಿಯಾಗಿದೆ ಮತ್ತು ಹೇಳಿಕೆ II ತಪ್ಪಾಗಿದೆ.

5. ಆಪ್ಟಿಕಲ್ ಫೈಬರ್ ಯಾವ ಪ್ರಕ್ರಿಯೆಯ ಮೇಲೆ ಕಾರ್ಯ ನಿರ್ವಹಿಸುತ್ತವೆ ?
   (1) ವರ್ಣ ವಿಭಜನೆ
   (2) ಪೂರ್ಣಾಂತರಿಕ ಪ್ರತಿಫಲನ
   (3) ವಕ್ರೀಭವನ
   (4) ಪ್ರತಿಫಲನ

ಕಚ್ಚಾ ಕಾರ್ಯಕ್ಕಾಗಿ ಸ್ಥಳ

www.prepp.in

Prepp
Your Personal Exams Guide

6. "ಜಯಾ" ವು __A__ ದ ಅರೆಕುಬ್ಜ ತಳಿಯಾಗಿದೆ ಮತ್ತು "ಸೊನಾಲಿಕಾ" ವು __B__ ಯ ಅಧಿಕ ಇಳುವರಿ ನೀಡುವ ಮತ್ತು ರೋಗ ನಿರೋಧಕ ತಳಿಯಾಗಿದೆ. A ಮತ್ತು B ಗಳನ್ನು ಗುರುತಿಸಿರಿ.

(1) A – ಮೆಕ್ಕೆಜೋಳ, B – ಭತ್ತ
(2) A – ಭತ್ತ, B – ಮೆಕ್ಕೆಜೋಳ
(3) A – ಗೋಧಿ, B – ಭತ್ತ
(4) A – ಭತ್ತ, B – ಗೋಧಿ

7. 'ಫರಕ್ಕಾ ಬ್ಯಾರೇಜ್' ಅನ್ನು ಭಾರತದ ಯಾವ ನೆರೆ ರಾಷ್ಟ್ರದ ಹತ್ತಿರ ನಿರ್ಮಿಸಲಾಗಿದೆ ?

(1) ಚೀನಾ
(2) ಬಾಂಗ್ಲಾದೇಶ
(3) ಪಾಕಿಸ್ತಾನ
(4) ಶ್ರೀಲಂಕಾ

8. ಭಾರತದ ಮಹಿಳಾ ಕ್ರಿಕೆಟ್ ತಂಡದ ನಾಯಕಿಯರನ್ನು (ಕ್ಯಾಪ್ಟನ್ಸ್) ಕಾಲಾನುಕ್ರಮದಲ್ಲಿ ಜೋಡಿಸಿ.

a. ಮಿಥಾಲಿ ರಾಜ್
b. ಅಂಜುಮ್ ಚೋಪ್ರಾ
c. ಹರ್ಮನ್‌ಪ್ರೀತ್ ಕೌರ್
d. ಶಾಂತಾ ರಂಗಸ್ವಾಮಿ

ಈ ಕೆಳಗೆ ನೀಡಲಾದ ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ.

(1) d, b, a, c
(2) d, a, b, c
(3) b, a, c, d
(4) c, a, b, d

9. 2026 ರ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಘೋಷ ವಾಕ್ಯ (ಥೀಮ್) ________.

(1) ಯೋಗಾ ಫಾರ್ ವಸುದೈವ ಕುಟುಂಬಕಮ್
(2) ಯೋಗಾ ಫಾರ್ ಸೆಲ್ಫ್ ಆ್ಯಂಡ್ ಸೊಸೈಟಿ
(3) ಯೋಗಾ ಫಾರ್ ಒನ್ ಅರ್ಥ್, ಒನ್ ಹೆಲ್ತ್
(4) ಯೋಗಾ ಫಾರ್ ಹೆಲ್ತಿ ಏಜಿಂಗ್

10. ಈ ಕೆಳಗಿನ ಫುಟ್‌ಬಾಲ್ ಆಟಗಾರರಲ್ಲಿ ಯಾರು "ಕಿಂಗ್ ಆಫ್ ಫುಟ್‌ಬಾಲ್" ಎಂದು ಕರೆಯಲ್ಪಡುತ್ತಾರೆ ?

(1) ಡಿಯಗೋ ಮರಡೋನಾ
(2) ಪೀಲೆ
(3) ಕ್ರಿಸ್ಟಿಯಾನೋ ರೊನಾಲ್ಡೊ
(4) ಲಿಯೋನೆಲ್ ಮೆಸ್ಸಿ

11. ಇವುಗಳ ಮೂಲಕ ಹಸಿರು ಕ್ರಾಂತಿಯನ್ನು ಸಾಧಿಸಬಹುದು.

i. ಜೆನೆಟಿಕ್ ಇಂಜಿನಿಯರಿಂಗ್
ii. ಅಂಗಾಂಶ ಕೃಷಿ
iii. ಸಸ್ಯತಳಿ ಸಂವರ್ಧನೆ
iv. ಪ್ರಾಣಿತಳಿ ಸಂವರ್ಧನೆ

ಈ ಕೆಳಗಿನ ಆಯ್ಕೆಗಳಿಂದ ಸರಿಯಾದುದನ್ನು ಆಯ್ಕೆ ಮಾಡಿ.

(1) i ಮತ್ತು iii
(2) i, ii ಮತ್ತು iii
(3) iii ಮತ್ತು iv
(4) i ಮತ್ತು ii

12. ಯಾವುದು ಬೇರುಕಾಂಡಕ್ಕೆ (ರೈಜೋಮ್) ಉದಾಹರಣೆಯಾಗಿದೆ ?

(1) ಆಲೂಗಡ್ಡೆ
(2) ಶುಂಠಿ
(3) ಗಜ್ಜರಿ
(4) ಈರುಳ್ಳಿ

13. ದೈತ್ಯ ವರ್ಣತಂತುಗಳು ಯಾವ ಜೀವಿಯಲ್ಲಿದೆ ?

(1) ಕ್ಲೋರೆಲ್ಲಾ
(2) ಯುಗ್ಲಿನಾ
(3) ಅಮೀಬಾ
(4) ಡ್ರೊಸೋಫಿಲಾ

ಕಚ್ಚಾ ಕಾರ್ಯಕ್ಕಾಗಿ ಸ್ಥಳ

www.prepp.in

Prepp
Your Personal Exams Guide

22. ಗ್ಲಾಸ್ಗೋದಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟ – 2026 ರಲ್ಲಿ ಭಾರತದ ಧ್ವಜಧಾರಿಯಾಗಿದ್ದವರು ಯಾರು ?

(1) ಪಿ.ವಿ. ಸಿಂಧು
(2) ಮನು ಭಾಕರ್
(3) ಮೀರಾಬಾಯಿ ಚಾನು
(4) ಲವ್ಲಿನಾ ಬೊರ್ಗೊಹೈನ್

23. ವಿಕ್ರಮ್ ಸೇನ್ ಅವರ ಯಾವ ಕಾದಂಬರಿಗೆ 2026 ನೇ ಸಾಲಿನ ವಿಶ್ವ ಸಾಹಿತ್ಯ ಪ್ರಶಸ್ತಿಯನ್ನು ನೀಡಲಾಗಿದೆ ?

(1) ವಾಟ್ ವಿ ಕ್ಯಾನ್ ನೋ
(2) ದಿ ವಿಸ್ಪರಿಂಗ್ ಸ್ಯಾಂಡ್ಸ್
(3) ಲ್ಯಾಂಡ್
(4) ಹಾಫ್ ಹಿಸ್ ಏಜ್

24. ಜೋಗಿಮಟ್ಟಿ ಖಾಸಗಿ ಪವನ ವಿದ್ಯುತ್ ಕೇಂದ್ರ ಕರ್ನಾಟಕದ ಯಾವ ಜಿಲ್ಲೆಯಲ್ಲಿದೆ ?

(1) ತುಮಕೂರು
(2) ಮೈಸೂರು
(3) ಹಾಸನ
(4) ಚಿತ್ರದುರ್ಗ

25. ಪ್ರಸ್ತುತ (ಆಗಸ್ಟ್ 2026) ನೇಪಾಳದಲ್ಲಿನ ಭಾರತದ ರಾಯಭಾರಿ ಯಾರು ?

(1) ನವೀನ್ ಶ್ರೀವಾಸ್ತವ
(2) ಡಾ. ಸ್ವಾತಿ ವಿಜಯ್ ಕುಲಕರ್ಣಿ
(3) ಸಂದೀಪ್ ಸೂದ್
(4) ನೀರಜ್ ಅಗರ್‌ವಾಲ್

26. ಈ ಕೆಳಗಿನ ಹೇಳಿಕೆಗಳನ್ನು ಓದಿ ಸರಿಯಾದ ಆಯ್ಕೆಯನ್ನು ಆರಿಸಿ.

**ಹೇಳಿಕೆ I** : ಶೇಕಡ 71 ರಷ್ಟು ಇಂಗಾಲವು ಸಾಗರದಲ್ಲಿ ಕರಗಿರುವುದು ಕಂಡುಬರುತ್ತದೆ.

**ಹೇಳಿಕೆ II** : ಸಾಗರದ ಇಂಗಾಲ ಸಂಗ್ರಹವು ವಾತಾವರಣದ ಇಂಗಾಲದ ಡೈ ಆಕ್ಸೈಡ್‌ನ ಪ್ರಮಾಣವನ್ನು ನಿಯಂತ್ರಿಸುತ್ತದೆ.

ಈ ಕೆಳಗೆ ನೀಡಿರುವ ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) ಹೇಳಿಕೆ I ಮತ್ತು ಹೇಳಿಕೆ II ಎರಡೂ ತಪ್ಪು.
(2) ಹೇಳಿಕೆ I ತಪ್ಪು ಆದರೆ ಹೇಳಿಕೆ II ಸರಿ.
(3) ಹೇಳಿಕೆ I ಸರಿ ಆದರೆ ಹೇಳಿಕೆ II ತಪ್ಪು.
(4) ಹೇಳಿಕೆ I ಮತ್ತು ಹೇಳಿಕೆ II, ಎರಡೂ ಹೇಳಿಕೆಗಳು ಸರಿ.

27. "ನ್ಯಾಷನಲ್ ಬ್ಯುರೋ ಆಫ್ ಫಿಶ್ ಜೆನೆಟಿಕ್ ರಿಸೋರ್ಸಸ್" ಎಲ್ಲಿದೆ ?

(1) ಲಕ್ನೋ
(2) ನವ ದೆಹಲಿ
(3) ಮುಂಬಯಿ
(4) ಬೆಂಗಳೂರು

28. ಈ ಕೆಳಗಿನವರುಗಳಲ್ಲಿ ಯಾರಿಗೆ 2024 ಮತ್ತು 2025 ನೇ ಸಾಲಿನ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯು ಲಭಿಸಿಲ್ಲ ?

(1) ಅರ್ಜುನ್ ಜನ್ಯಾ (ಸಂಗೀತ)
(2) ವೀಣಾ ಮೂರ್ತಿ ವಿಜಯ್ (ಕೂಚಿಪುಡಿ)
(3) ಟಿ.ಎಸ್. ನಾಗಾಭರಣ (ರಂಗಭೂಮಿ)
(4) ಕೆರೆಮನೆ ಶಿವಾನಂದ ಹೆಗಡೆ (ಯಕ್ಷಗಾನ)

ಕಚ್ಚಾ ಕಾರ್ಯಕ್ಕಾಗಿ ಸ್ಥಳ

www.prepp.in

Prepp
Your Personal Exams Guide

29. ನಾಗರಿಕ ಸೇವೆಗಳಲ್ಲಿ ನೈತಿಕತೆಯನ್ನು ಎತ್ತಿಹಿಡಿಯುವಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಸವಾಲಾಗುವುದಿಲ್ಲ ?

(1) ಸಂಪನ್ಮೂಲ ನಿರ್ಬಂಧಗಳು
(2) ಹಿತಾಸಕ್ತಿಯ ಸಂಘರ್ಷಗಳು
(3) ವಸ್ತು ನಿಷ್ಠತೆ
(4) ರಾಜಕೀಯ ಒತ್ತಡ

30. ನೀವು ರಾಜ್ಯ ಸರ್ಕಾರದ ಸಚಿವಾಲಯದಲ್ಲಿ ಸರ್ಕಾರಿ ಅಧಿಕಾರಿಯಾಗಿದ್ದೀರಿ. ನಿವೃತ್ತ ಸರ್ಕಾರಿ ನೌಕರರೊಬ್ಬರು ತಮ್ಮ ಪಿಂಚಣಿ ಪತ್ರಗಳನ್ನು ನೀವು ನಿಯಮಾನುಸಾರ ತ್ವರಿತವಾಗಿ ಪ್ರಕ್ರಿಯೆಗೊಳಿಸಿದ್ದಕ್ಕಾಗಿ ನಿಮಗೆ ಧನ್ಯವಾದ ಹೇಳಲು ನಿಮ್ಮ ಸರ್ಕಾರಿ ಕಛೇರಿಗೆ ಬಂದಿದ್ದಾರೆ. ಅವರು ಕೃತಜ್ಞತೆಯ ಸಂಕೇತವಾಗಿ ನಿಮಗೆ ದುಬಾರಿ ಉಡುಗೊರೆಯನ್ನು ನೀಡುತ್ತಾರೆ. ಆಗ ನೀವು ಏನು ಮಾಡುತ್ತೀರಿ ?

(1) ದುಬಾರಿ ಉಡುಗೊರೆಗಳನ್ನು ಸ್ವೀಕರಿಸುವುದು CCS (ನಡತೆ) ನಿಯಮಗಳನ್ನು ಉಲ್ಲಂಘಿಸುತ್ತದೆ ಎಂದು ಉಡುಗೊರೆಯನ್ನು ನಯವಾಗಿ ನಿರಾಕರಿಸುತ್ತೀರಿ.
(2) ದುಬಾರಿ ಉಡುಗೊರೆಯನ್ನು ಸ್ವೀಕರಿಸಿ ಬಡವರಿಗೆ ನೀಡುತ್ತೀರಿ.
(3) ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದು, ಯಾವುದೇ ಲಂಚವನ್ನು ಕೇಳಿಲ್ಲವಾದ್ದರಿಂದ ದುಬಾರಿ ಉಡುಗೊರೆಯನ್ನು ಸ್ವೀಕರಿಸುತ್ತೀರಿ.
(4) ದುಬಾರಿ ಉಡುಗೊರೆಯನ್ನು ಸ್ವೀಕರಿಸುತ್ತೀರಿ ಆದರೆ ಅದರ ಮೌಲ್ಯವನ್ನು ಸರ್ಕಾರಿ ಖಜಾನೆಗೆ ತುಂಬುತ್ತೀರಿ.

31. 'ತಾಳ್ಮೆ'ಯನ್ನು ಒಂದು ಗುಣವಾಗಿ ಪರಿಗಣಿಸಿ ಸರಿಯಾದ ಹೇಳಿಕೆಯನ್ನು ಆರಿಸಿ.

a. ಇದು ಸಮಯದ ವ್ಯರ್ಥ.
b. ಜನರು ನಿಮ್ಮ ತಾಳ್ಮೆಯನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ.
c. ಇದು ನಮ್ಮನ್ನು ಹೆಚ್ಚು ಕಾಳಜಿಯುಳ್ಳವರನ್ನಾಗಿ ಮಾಡುತ್ತದೆ ಮತ್ತು ಇತರರ ಅಗತ್ಯಗಳನ್ನು ಅರ್ಥಮಾಡಿಕೊಳ್ಳು ಸಹಾಯ ಮಾಡುತ್ತದೆ.
d. ಇದು ಆತ್ಮಾವಲೋಕನಕ್ಕೆ ಸಹಾಯ ಮಾಡುತ್ತದೆ.
e. ಕೆಲವೊಮ್ಮೆ ತಾಳ್ಮೆ ಎಂಬುದು ಕೆಲಸವನ್ನು ಸರಿಯಾದ ಸಮಯಕ್ಕೆ ಸರಿಯಾಗಿ ಮಾಡದಿರಲು ಒಂದು ನೆಪವಾಗುತ್ತದೆ

(1) a, b, c, d ಮತ್ತು e
(2) c, d ಮತ್ತು e
(3) b, c ಮತ್ತು d
(4) a, c ಮತ್ತು e

32. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ I : ದ್ವಿಪರಿಣಾಮ ಸಿದ್ಧಾಂತವು ಒಂದು ನೈತಿಕ ಚೌಕಟ್ಟಾಗಿದ್ದು, ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳನ್ನು ಹೊಂದಿರುವ ಕ್ರಿಯೆಯು ನೈತಿಕವಾಗಿ ಅನುಮತಿಸಲ್ಪಡುತ್ತದೆಂದು ಹೇಳುತ್ತದೆ.

ಹೇಳಿಕೆ II : ಒಂದು ಕ್ರಿಯೆಯು ತಂತಾನೆ ನೈತಿಕವಾಗಿ ಒಳ್ಳೆಯದಾಗಿರಬೇಕು ಅಥವಾ ಕೆಟ್ಟದಾಗಿರಬೇಕು ಮತ್ತು ಅದರ ಪರಿಣಾಮಗಳಿಂದ ಸ್ವತಂತ್ರವಾಗಿರಬೇಕು.

ಕೊಟ್ಟಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿಯಾಗಿದೆ.
(2) ಹೇಳಿಕೆ I ಮತ್ತು ಹೇಳಿಕೆ II ಎರಡೂ ತಪ್ಪಾಗಿವೆ.
(3) ಹೇಳಿಕೆ II ಮಾತ್ರ ಸರಿಯಾಗಿದೆ.
(4) ಹೇಳಿಕೆ I ಮಾತ್ರ ಸರಿಯಾಗಿದೆ.

33. ನೈತಿಕ ನಿರ್ಧಾರ ಕೈಗೊಳ್ಳುವಿಕೆಯ ಮೇಲೆ ಆತ್ಮಸಾಕ್ಷಿಯು ಹೇಗೆ ಪ್ರಭಾವ ಬೀರುತ್ತದೆ ?

(a) ಹೊಣೆಗಾರಿಕೆಯನ್ನು ಖಾತರಿಪಡಿಸುತ್ತದೆ.
(b) ನೈತಿಕ ಚಿಂತನೆಯನ್ನು ಪ್ರೋತ್ಸಾಹಿಸುತ್ತದೆ.
(c) ಸಂದಿಗ್ಧತೆಯನ್ನು ಹೆಚ್ಚಿಸುತ್ತದೆ.
(d) ಸಹಾನುಭೂತಿ ಮತ್ತು ಕರುಣೆಯನ್ನು ಪೋಷಿಸುತ್ತದೆ.

ಕೊಟ್ಟಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) (a), (b) ಮತ್ತು (d)
(2) (a), (c) ಮತ್ತು (d)
(3) (a), (b) ಮತ್ತು (c)
(4) (b), (c) ಮತ್ತು (d)

ಕಚ್ಚಾ ಕಾರ್ಯಕ್ಕಾಗಿ ಸ್ಥಳ

www.prepp.in
Prepp
Your Personal Exams Guide

34. ರಾಷ್ಟ್ರಕೂಟರ ಕಾಲದಲ್ಲಿದ್ದ 'ಕಳಂಜು' ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ ?
(1) ಶಾಸನ (2) ಕಾಲ್ದಳ (3) ಭೂಕಂದಾಯ (4) ನಾಣ್ಯಗಳು

35. ಕೆಳದಿಯ ಶಿವಪ್ಪ ನಾಯಕನ ಬಳಿ ಸ್ವಲ್ಪಕಾಲ ಆಶ್ರಯ ಪಡೆದಿದ್ದ ವಿಜಯನಗರದ ಅರಸ ಯಾರು ?
(1) ಮೂರನೇ ಶ್ರೀರಂಗರಾಯ (2) ರಾಮದೇವ
(3) ಎರಡನೇ ಶ್ರೀರಂಗರಾಯ (4) ಎರಡನೇ ವೆಂಕಟಪತಿರಾಯ

36. ಭಾರತವು ಬಹಿಷ್ಕಾರ ಚಳವಳಿಯನ್ನು ಆಯುಧವಾಗಿ ಬಳಸುವುದಕ್ಕಿಂತ ಮೊದಲೇ ಕೆಳಗಿನ ಯಾವ ದೇಶದ ಸ್ವಾತಂತ್ರ್ಯ ಹೋರಾಟಗಾರರು ಇದನ್ನು ಬ್ರಿಟೀಷರ ವಿರುದ್ಧ ಬಳಸಿದ್ದರು ?
(1) ಅಮೇರಿಕಾ (2) ದಕ್ಷಿಣ ಆಫ್ರಿಕಾ (3) ಈಜಿಪ್ಟ್ (4) ಐರ್ಲೆಂಡ್

37. ಕಾರ್ಮಿಕ ಮತ್ತು ಸಮಾಜವಾದಿ ಸಂಘಟಕರಿಗೆ ಸಂಬಂಧಿಸಿದಂತೆ ಈ ಕೆಳಗಿನ ಜೋಡಿಗಳನ್ನು ಪರಿಗಣಿಸಿ.
a. ಎನ್.ಎಮ್. ಲೋಖಂಡೆ – ಬಾಂಬೆ ಮಿಲ್‌ಹ್ಯಾಂಡ್ಸ್
b. ಸಿಂಗರವೇಲು ಚೆಟ್ಟಿಯಾರ್ – ದಕ್ಷಿಣ ಭಾರತದ ಕಮ್ಯುನಿಸ್ಟ್
c. ತಿರುವಿಕ – ಮದ್ರಾಸ್ ಕಾರ್ಮಿಕ ದಂಗೆ
d. ಅಶ್ವಿನಿ ಬ್ಯಾನರ್ಜಿ – ಅಹಮದಾಬಾದ್ ಟೆಕ್ಸ್‌ಟೈಲ್ ಅಸೋಸಿಯೇಷನ್
ಮೇಲಿನ ಯಾವ ಜೋಡಿಗಳು ಸರಿಯಾಗಿ ಹೊಂದಿಕೆಯಾಗಿವೆ ?
(1) b, c ಮತ್ತು d (2) a ಮತ್ತು d (3) a ಮತ್ತು c (4) a, b ಮತ್ತು c

38. ಭಾರತಕ್ಕೆ ಬಂದ ಮೊದಲ ಯಹೂದಿ ಮಿಷನರಿ ಯಾರು ?
(1) ವಿಲಿಯಂ ಕ್ಯಾರಿ (2) ಕಾರ್ಮೆಲೈಟ್
(3) ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ (4) ಅಗಸ್ಟೇನಿಯನ್

39. ಸಹಾಯಕ ಸೈನ್ಯ ಪದ್ಧತಿಗೆ ಬಲಿಯಾದ ಭಾರತದ ಪ್ರಥಮ ರಾಜ್ಯವನ್ನು ಗುರುತಿಸಿ.
(1) ಮರಾಠ (2) ಹೈದರಾಬಾದ್ (3) ಮೈಸೂರು (4) ಔಧ್

40. ಈ ಕೆಳಗಿನವುಗಳಲ್ಲಿ ಗಾಂಧೀಜಿಯವರು ಕರ್ನಾಟಕಕ್ಕೆ ಕೊನೆಯದಾಗಿ ಭೇಟಿ ನೀಡಿದ ವರ್ಷ ಯಾವುದು ?
(1) 1947 (2) 1937 (3) 1930 (4) 1915

41. ಸಿಖ್ ಧರ್ಮದ ಪ್ರಚಾರಕ್ಕಾಗಿ 'ಮಸಂದ ಪದ್ಧತಿ' ಪರಿಚಯಿಸಿದ ಸಿಖ್ ಗುರು ಯಾರು ?
(1) ಗುರು ಅಂಗದ (2) ಗುರು ಅರ್ಜುನದೇವ್ (3) ಗುರು ರಾಮದಾಸ (4) ಗುರು ಅಮರದಾಸ

42. ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ 'ಮಾನಸ್ತಂಭ' ಮತ್ತು 'ಬ್ರಹ್ಮಸ್ತಂಭ' ಗಳ ಕೊಡುಗೆ ನೀಡಿದವರು ಯಾರು ?
(1) ಬಾದಾಮಿ ಚಾಲುಕ್ಯರು (2) ಶಾತವಾಹನರು
(3) ಗಂಗರು (4) ಕದಂಬರು

ಕಚ್ಚಾ ಕಾರ್ಯಕ್ಕಾಗಿ ಸ್ಥಳ

www.prepp.in

Prepp
Your Personal Exams Guide

43. ಹಸರಾಂತ "ಸಂಗೋಲ ಒಪ್ಪಂದ" ವು ಕೆಳಗಿನ ಯಾರ ನಡುವೆ ನಡೆಯಿತು ?

(1) ಒಂದನೇ ಬಾಜಿರಾಯ – ಅಹ್ಮದ್-ಷಾ-ಅಬ್ದಾಲಿ
(2) ಬಾಲಾಜಿ ಬಾಜಿರಾಯ – ತಾರಾಬಾಯಿ
(3) ಬಾಲಾಜಿ ಬಾಜಿರಾಯ – ರಾಜಾರಾಮ
(4) ಒಂದನೇ ಬಾಜಿರಾಯ – ನಿಜಾಮ್-ಉಲ್-ಮುಲ್ಕ್

44. ಬಹಮನಿ ಸಾಮ್ರಾಜ್ಯದ ಅವನತಿ ನಂತರ ಸ್ಥಾಪಿತವಾದ ಐದು ಷಾಹಿ ರಾಜವಂಶಗಳಿಗೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿ.

a. ಆದಿಲ್ ಷಾಹಿ ರಾಜವಂಶದ ಆಶ್ರಯದಲ್ಲಿ ಬಿಜಾಪುರ. b. ಕುತುಬ್ ಷಾಹಿ ರಾಜವಂಶದ ಆಶ್ರಯದಲ್ಲಿ ಗೋಲ್ಕೊಂಡ.
c. ಇಮಾಮ್ ಷಾಹಿ ರಾಜವಂಶದ ಆಶ್ರಯದಲ್ಲಿ ಬೀದರ್. d. ನಿಜಾಮ್ ಷಾಹಿ ರಾಜವಂಶದ ಆಶ್ರಯದಲ್ಲಿ ಅಹ್ಮದ್‌ನಗರ.

(1) b ಮತ್ತು d
(2) c ಮಾತ್ರ
(3) d ಮಾತ್ರ
(4) a ಮತ್ತು b

45. ಅಶೋಕನ ಶಾಸನಗಳಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

a. ಅಶೋಕನ ವೈಯಕ್ತಿಕ ಹೆಸರು ಮಸ್ಕಿ, ಉದೇಗೋಳಂ, ನಿಟ್ಟೂರು ಮತ್ತು ಗುಜ್ಜಾರದಲ್ಲಿ ದೊರೆತ ಕಿರು ಶಿಲಾಶಾಸನಗಳಲ್ಲಿ ಮಾತ್ರ ಕಂಡುಬರುತ್ತದೆ.

b. ಯೆರ್ರಾಗುಡಿಯ ಅಶೋಕನ ಶಾಸನದ ಕೆಲವು ಭಾಗಗಳಲ್ಲಿ ಬೋಸ್ಟ್ರೋಫೆಡಾನ್ ಶೈಲಿಯಲ್ಲಿ ಬರೆಯಲಾಗಿದೆ.

ಈ ಮೇಲಿನವುಗಳಲ್ಲಿ ಯಾವ ಹೇಳಿಕೆ/ಗಳು ಸರಿಯಾಗಿದೆ/ವೆ ?

(1) a ಅಥವಾ b ಎರಡೂ ಅಲ್ಲ
(2) a ಮತ್ತು b ಎರಡೂ
(3) b ಮಾತ್ರ
(4) a ಮಾತ್ರ

46. ಈ ಕೆಳಗಿನ ಪಟ್ಟಿ-I ಅನ್ನು ಪಟ್ಟಿ-II ರೊಂದಿಗೆ ಹೊಂದಿಸಿ ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – I | ಪಟ್ಟಿ – II |
|---|---|
| a. ಋಗ್ವೇದ | i. ಮುದ್ರಾ ರಾಕ್ಷಸ |
| b. ವಿಶಾಖದತ್ತ | ii. ಜೈನ ಸಾಹಿತ್ಯ ಕೃತಿ |
| c. ಅಂಗುತ್ತರ ನಿಕಾಯ | iii. ಪ್ರಾಚೀನ ಹಿಂದೂ ಧಾರ್ಮಿಕ ಗ್ರಂಥ |
| d. ಜಯ ಧವಳ | iv. ಬೌದ್ಧ ಸಾಹಿತ್ಯ ಗ್ರಂಥ |

(1) a-iv, b-ii, c-iii, d-i
(2) a-ii, b-i, c-iii, d-iv
(3) a-i, b-iii, c-iv, d-ii
(4) a-iii, b-i, c-iv, d-ii

47. ಕುತುಬುದ್ದೀನ್ ಐಬಕ್ ನಿಗೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿ.

a. ಐಬಕ್‌ನು ದೆಹಲಿ ಸುಲ್ತಾನರ ಮೊದಲ ಸಂತತಿ ಸ್ಥಾಪಿಸುವಲ್ಲಿ ಯಶಸ್ವಿಯಾದನು.
b. ಐಬಕ್‌ನು ತುರ್ಕಿಸ್ಥಾನದಲ್ಲಿ ಜನಿಸಿದನು.
c. ಈತನು ಗುಲಾಮು ದೊರೆ ಆಗಲಿಲ್ಲ.
d. ಐಬಕ್ ನು 'ಸುಲ್ತಾನ' ಎಂಬ ಬಿರುದು ಹೊಂದಿರಲಿಲ್ಲ.

(1) c ಮಾತ್ರ
(2) c ಮತ್ತು d
(3) d ಮಾತ್ರ
(4) a ಮತ್ತು b

ಕಚ್ಚಾ ಕಾರ್ಯಕ್ಕಾಗಿ ಸ್ಥಳ

www.prepp.in
Prepp
Your Personal Exams Guide

48. ಈ ಕೆಳಕಂಡ ಮೈಸೂರು ದಿವಾನರನ್ನು ಕಾಲಾನುಕ್ರಮದಲ್ಲಿ ಜೋಡಿಸಿ.

a. ಶೇಷಾದ್ರಿ ಅಯ್ಯರ್
b. ರಂಗಾಚಾರ್ಲು
c. ಮಿರ್ಜಾ ಇಸ್ಮಾಯಿಲ್
d. ಸರ್.ಎಂ. ವಿಶ್ವೇಶ್ವರಯ್ಯ

(1) b, a, c, d (2) d, b, c, a (3) a, b, c, d (4) b, a, d, c

49. 'ತಾಯಿನಾಡು' ಪತ್ರಿಕೆಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

a. 1925 ರಲ್ಲಿ ಇದನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಲಾಯಿತು.
b. ಪಿ.ಆರ್. ರಾಮಯ್ಯನವರು ಇದರ ಸಂಸ್ಥಾಪಕರು.
c. ಪಿ.ಆರ್. ರಾಮಯ್ಯ, ವೆಂಕಟಕೃಷ್ಣಯ್ಯನವರ ಶಿಷ್ಯರಾಗಿದ್ದರು.
d. ರಜತೋತ್ಸವವನ್ನು ಆಚರಿಸಿದ ಮೊದಲ ಕನ್ನಡ ವಾರ್ತಾಪತ್ರಿಕೆ.

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) a, c ಮತ್ತು d (2) b, c ಮತ್ತು d (3) a, b ಮತ್ತು d (4) a, b ಮತ್ತು c

50. ಈ ಕೆಳಗಿನ ಪಟ್ಟಿ-I ಅನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – I (ಎತ್ತರದ ಶಿಖರಗಳು) | | ಪಟ್ಟಿ – II (ರಾಜ್ಯಗಳು) | |
|---|---|---|---|
| a. | ದೂಪ್‌ಗರ್ | i. | ಕರ್ನಾಟಕ |
| b. | ದೊಡ್ಡಬೆಟ್ಟ | ii. | ಮಹಾರಾಷ್ಟ್ರ |
| c. | ಮುಳ್ಳಯ್ಯನಗಿರಿ | iii. | ಮಧ್ಯ ಪ್ರದೇಶ |
| d. | ಕಳಸುಬಾಯಿ | iv. | ತಮಿಳುನಾಡು |

(1) a-iv, b-iii, c-i, d-ii
(2) a-iii, b-iv, c-i, d-ii
(3) a-iii, b-iv, c-ii, d-i
(4) a-ii, b-iv, c-iii, d-i

51. ಹಂಪಿಯ ಅವಶೇಷಗಳನ್ನು ಕ್ರಿ.ಶ. 1800 ರಲ್ಲಿ ಬೆಳಕಿಗೆ ತಂದವರು ________.

(1) ರಾಬರ್ಟ್ ಬ್ರೂಸ್ ಫೂಟ್
(2) ಅಲೆಕ್ಸಾಂಡರ್ ಕನ್ನಿಂಗ್‌ಹ್ಯಾಮ್
(3) ರಾಬರ್ಟ್ ಸಿವೆಲ್
(4) ಕರ್ನಲ್ ಕೊಲಿನ್ ಮೆಕೆಂಜಿ

52. "ವೀರಭದ್ರ ವಿಜಯಂ" ಎಂಬ ಸಂಸ್ಕೃತ ಕೃತಿಯು ಈ ಕೆಳಗಿನ ಯಾವ ರಾಜವಂಶದ ಬಗ್ಗೆ ಮಾಹಿತಿ ನೀಡುತ್ತದೆ ?

(1) ದ್ವಾರಸಮುದ್ರದ ಹೊಯ್ಸಳರು
(2) ಕಂಚಿಯ ಪಲ್ಲವರು
(3) ಯಲಹಂಕದ ನಾಡಪ್ರಭು
(4) ಬನವಾಸಿಯ ಕದಂಬರು

53. 1907 ರಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸೂರತ್ ಅಧಿವೇಶನದಲ್ಲಿ ಭಾಗವಹಿಸಿದ ಕನ್ನಡಿಗರನ್ನು ಗುರುತಿಸಿ.

(a) ಶ್ರೀನಿವಾಸರಾವ್ ಕೌಜಲಗಿ
(b) ಚಿತ್ತರಂಜನ್ ದಾಸ್
(c) ಶಂಕರ್ ಕುರ್ತಕೋಟಿ
(d) ಅಣ್ಣಾಚಾರ್ಯ ಹೊಸಕೇರಿ

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) (b) ಮತ್ತು (d) (2) (a) ಮತ್ತು (d) (3) (b) ಮತ್ತು (c) (4) (a) ಮತ್ತು (b)

ಕಚ್ಚಾ ಕಾರ್ಯಕ್ಕಾಗಿ ಸ್ಥಳ

www.prepp.in

54. ಈ ಕೆಳಕಂಡ ಯಾವ ಬೆಟ್ಟವನ್ನು ಐತಿಹಾಸಿಕವಾಗಿ, "ಮಾರ್ಬಲ ಬೆಟ್ಟ" ಅಥವಾ "ಮಹಾಬಲ ಬೆಟ್ಟ" ಎಂದು ಕರೆಯಲಾಗುತ್ತದೆ?
(1) ಬಿಳಿಗಿರಿ ರಂಗನ ಬೆಟ್ಟ (2) ಮಧುಗಿರಿ ಬೆಟ್ಟ (3) ನಂದಿ ಬೆಟ್ಟ (4) ಚಾಮುಂಡಿ ಬೆಟ್ಟ

55. ಕೆಳಗಿನವುಗಳಲ್ಲಿ ಯಾವುದು ಪೆಸಿಫಿಕ್ ಮಹಾಸಾಗರದ ಸಾಗರ ಪ್ರವಾಹವಲ್ಲ ?
(1) ಪೆರು (2) ಹಂಬೊಲ್ಟ್ (3) ಕ್ಯಾನರಿ (4) ಕುರೋಷಿಯೊ

56. ಈ ಕೆಳಗಿನವುಗಳ ಭೂರಚನೆಯನ್ನು ಒಳಪದರದಿಂದ ಹೊರಪದರಕ್ಕೆ ಕ್ರಮದಲ್ಲಿ ಜೋಡಿಸಿ.
a. ಭೂಖಂಡ ಕವಚ b. ನೀಫೆ (ಕೇಂದ್ರ ಗೋಳ) c. ಸೀಮಾ (SIMA) d. ಹೊರಕೇಂದ್ರ ಗೋಳ
(1) b, a, d, c (2) b, d, a, c (3) a, b, c, d (4) d, b, c, a

57. ಈ ಪರ್ವತ ಶ್ರೇಣಿಯು ಯುರೋಪ್ ಅನ್ನು ಏಷ್ಯಾದಿಂದ ಬೇರ್ಪಡಿಸುತ್ತದೆ.
(1) ಹಿಮಾಲಯ ಪರ್ವತಗಳು (2) ಆಲ್ಪ್ಸ್ ಪರ್ವತಗಳು
(3) ಯೂರಲ್ ಪರ್ವತಗಳು (4) ಎಲ್ಬರ್ಜ್ ಪರ್ವತಗಳು

58. "ಅಮೇರಿಕಾದ ದ್ರಾಕ್ಷಿ ತೋಟ" ಎಂದು ಯಾವ ರಾಜ್ಯವನ್ನು ಕರೆಯುತ್ತಾರೆ?
(1) ಕ್ಯಾಲಿಫೋರ್ನಿಯಾ (2) ಸಿಂಸಿನ್ನಾಟಿ (3) ಕ್ಲಾರ್ಕ್ಸ್‌ವಿಲೆ (4) ಚಿಕ್ಯಾಗೋ

59. ಭಾರತದಲ್ಲಿ ಯಾವ ಕೈಗಾರಿಕಾ ನೀತಿಯು ಆಮದು ಮತ್ತು ರಫ್ತಿನ ಮೇಲಿನ ನೀತಿಯನ್ನು ಸಡಿಲಿಸಿದೆ ?
(1) ಕೈಗಾರಿಕಾ ನೀತಿ, 1956 (2) ಕೈಗಾರಿಕಾ ನೀತಿ, 1985
(3) ಕೈಗಾರಿಕಾ ನೀತಿ, 1973 (4) ಕೈಗಾರಿಕಾ ನೀತಿ, 1991

60. ಕೆಂಪು, ನೀಲಿ ಮತ್ತು ಹಳದಿ ವಲಯ ವರ್ಗೀಕರಣವು ಯಾವ ಪ್ರಾಕೃತಿಕ ವಿಪತ್ತಿಗೆ ಸಂಬಂಧಿಸಿದೆ ?
(1) ಕರಾವಳಿ ಕೊರೆತ (2) ಸುನಾಮಿ (3) ಭೂಕುಸಿತ (4) ಹಿಮಪಾತ

61. ಆಗ್ನೇಯ ಕೇಂದ್ರ ರೈಲ್ವೆ ವಲಯದ ಕೇಂದ್ರ ಕಚೇರಿ ಯಾವುದು ?
(1) ಹಾಜಿಪುರ್ (2) ಬಿಲಾಸ್‌ಪುರ್ (3) ಜಬಲ್‌ಪುರ್ (4) ವಿಶಾಖಪಟ್ಟಣ

62. ಈ ಕೆಳಗಿನವುಗಳಲ್ಲಿ ಕರ್ನಾಟಕದ ಅತಿ ಎತ್ತರದ ಅಣೆಕಟ್ಟು ಯಾವುದು ?
(1) ಚಕ್ರಾ (2) ಸೂಪಾ (3) ತುಂಗಭದ್ರಾ (4) ಲಿಂಗನಮಕ್ಕಿ

63. ಕೈಗಾ ಅಣು ವಿದ್ಯುತ್ ಸ್ಥಾವರ ಯಾವ ನದಿಯ ದಂಡೆಯ ಮೇಲಿದೆ ?
(1) ಶರಾವತಿ (2) ಬೇಡ್ತಿ (3) ಕಾಳಿ (4) ಅಘನಾಶಿನಿ

64. ಈ ಕೆಳಗಿನ ಯಾವ ವಿಮಾನ ನಿಲ್ದಾಣವನ್ನು ಅಧಿಕೃತವಾಗಿ 'ರಾಷ್ಟ್ರಕವಿ ಕುವೆಂಪು ವಿಮಾನ ನಿಲ್ದಾಣ' ಎಂದು ಮರುನಾಮಕರಣ ಮಾಡಲಾಗಿದೆ ?
(1) ಬೆಳಗಾವಿ (2) ಶಿವಮೊಗ್ಗ (3) ಹಾಸನ (4) ಮೈಸೂರು

ಕಚ್ಚಾ ಕಾರ್ಯಕ್ಕಾಗಿ ಸ್ಥಳ

www.prepp.in
Prepp
Your Personal Exams Guide

65. ಈ ಕೆಳಕಂಡ ಯಾವ ಸಮಿತಿಯು ಪಂಚಾಯಿತಿ ರಾಜ್ ಸಂಸ್ಥೆಗಳಿಗೆ ಸಾಂವಿಧಾನಿಕ ಸ್ಥಾನಮಾನವನ್ನು ಶಿಫಾರಸು ಮಾಡಿತು ?
(1) ತುಂಗನ್ ಸಮಿತಿ
(2) ಸಮುದಾಯ ಅಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ ಸಮಿತಿ
(3) ಜಿ.ವಿ.ಕೆ. ರಾವ್ ಸಮಿತಿ
(4) ಬಲವಂತರಾಯ್ ಮೆಹ್ತಾ ಸಮಿತಿ

66. EPIC – ವಿಸ್ತರಿಸಿರಿ.
(1) ಎಲೆಕ್ಟರ್ಸ್ ಫೋಟೋ ಐಡೆಂಟಿಟಿ ಕಾರ್ಡ್
(2) ಇವ್ಯಾಲ್ಯುಯೇಷನ್ ಫೋಟೋ ಐಡೆಂಟಿಟಿ ಕಾರ್ಡ್
(3) ಎಲೆಕ್ಟ್ರಾನಿಕ್ ಫೋಟೋ ಐಡೆಂಟಿಟಿ ಕಾರ್ಡ್
(4) ಎಲೆಕ್ಷನ್ ಫೋಟೋ ಐಡೆಂಟಿಟಿ ಕಾರ್ಡ್

67. ಸ್ವಸಹಾಯ ಸಂಘಗಳ (SHGs) ಕುರಿತು ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
a. ಸಾಮೂಹಿಕ ಉಳಿತಾಯವನ್ನು ಉತ್ತೇಜಿಸುವುದು
b. ವೈಯಕ್ತಿಕ ಸಾಧನೆಗಳು ಮತ್ತು ಯಶಸ್ಸು.
c. ಸದಸ್ಯರಲ್ಲದವರಿಗೆ ಉದ್ಯೋಗಾವಕಾಶಗಳನ್ನು ಒದಗಿಸುವುದು.
d. ಸಾಮೂಹಿಕ ಸಬಲೀಕರಣ ಮತ್ತು ಅಭಿವೃದ್ಧಿ.
ಮೇಲಿನವುಗಳಲ್ಲಿ ಯಾವುವು ಸರಿಯಾಗಿವೆ ?
(1) b ಮತ್ತು d
(2) b ಮತ್ತು c
(3) a ಮತ್ತು d
(4) a ಮತ್ತು c

68. ಈ ಕೆಳಕಂಡ ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ-I (ನದಿಗಳು) | | ಪಟ್ಟಿ-II (ಉಪನದಿಗಳು) | |
|---|---|---|---|
| a. | ಝೀಲಂ | i. | ಚಂಬಲ್ |
| b. | ಯಮುನಾ | ii. | ದಿಬಾಂಗ್ |
| c. | ದಾಮೋದರ್ | iii. | ಕೃಷ್ಣ ಗಂಗಾ |
| d. | ಬ್ರಹ್ಮಪುತ್ರಾ | iv. | ಕೋನಾರ್ |

(1) a-iii, b-iv, c-i, d-ii
(2) a-iv, b-iii, c-ii, d-i
(3) a-ii, b-iv, c-i, d-iii
(4) a-iii, b-i, c-iv, d-ii

69. ಭಾರತದಲ್ಲಿ ಅತಿಹೆಚ್ಚು ಪವನಶಕ್ತಿ ಸ್ಥಾಪಿತ ಸಾಮರ್ಥ್ಯವನ್ನು ಹೊಂದಿರುವ ರಾಜ್ಯ ಯಾವುದು ?
(1) ಪಶ್ಚಿಮ ಬಂಗಾಳ
(2) ತಮಿಳುನಾಡು
(3) ಮಹಾರಾಷ್ಟ್ರ
(4) ಗುಜರಾತ್

70. ಈ ಕೆಳಕಂಡ ಯಾವ ಚುನಾವಣೆಗಳನ್ನು ರಾಜ್ಯ ಚುನಾವಣಾ ಆಯೋಗವು ನಡೆಸುತ್ತದೆ ?
a. ಪಂಚಾಯಿತಿಗಳ ಚುನಾವಣೆ
b. ವಿಧಾನ ಪರಿಷತ್ ಚುನಾವಣೆ
c. ಮುನ್ಸಿಪಾಲಿಟಿಗಳ ಚುನಾವಣೆ
d. ವಿಧಾನ ಸಭೆ ಚುನಾವಣೆ
(1) a, b, c ಮತ್ತು d
(2) a, c ಮತ್ತು d
(3) a ಮತ್ತು c
(4) a, b ಮತ್ತು c

ಕಚ್ಚಾ ಕಾರ್ಯಕ್ಕಾಗಿ ಸ್ಥಳ

www.prepp.in

Prepp
Your Personal Exams Guide

71. ಕೇಂದ್ರ ಲೋಕಸೇವಾ ಆಯೋಗದ (UPSC) ಪ್ರಥಮ ಅಧ್ಯಕ್ಷರು ಯಾರು ?
(1) ಹೆಚ್.ಕೆ.ಎಲ್. ಕಪೂರ್ (2) ಬಿ.ಎನ್. ಝಾ (3) ಆರ್.ಎನ್. ಬ್ಯಾನರ್ಜಿ (4) ಸರ್ ರಾಸ್ ಬಾರ್ಕರ್

72. ಲೋಕಸಭೆಯ ಸಭಾಪತಿ ಹಾಗೂ ಉಪ ಸಭಾಪತಿಯ ಅನುಪಸ್ಥಿತಿಯಲ್ಲಿ ಯಾರು ಸಂಸತ್ತಿನ 'ಜಂಟಿ ಸದನ'ದ ಅಧ್ಯಕ್ಷತೆಯನ್ನು ವಹಿಸಿಕೊಳ್ಳುತ್ತಾರೆ ?
(1) ರಾಜ್ಯ ಸಭೆಯ ಹಿರಿಯ ಸದಸ್ಯ (2) ಲೋಕ ಸಭೆಯ ಹಿರಿಯ ಸದಸ್ಯ
(3) ರಾಜ್ಯ ಸಭೆಯ ಉಪಾಧ್ಯಕ್ಷರು (4) ರಾಜ್ಯ ಸಭೆಯ ಅಧ್ಯಕ್ಷ

73. ಭಾರತೀಯ ಸಂವಿಧಾನದ ಯಾವ ಭಾಗದಲ್ಲಿ ಅಧಿಕೃತ ಭಾಷಾ ನಿಬಂಧನೆಗಳನ್ನು ಉಲ್ಲೇಖಿಸಲಾಗಿದೆ ?
(1) ಭಾಗ – XVIII (2) ಭಾಗ – XVII (3) ಭಾಗ – XVI (4) ಭಾಗ – XV

74. ಈ ಕೆಳಗಿನವುಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ.
a. ರಾಷ್ಟ್ರೀಯ ತನಿಖಾ ಸಂಸ್ಥೆ
b. ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ
c. ಭಾರತೀಯ ನ್ಯಾಯ ಸಂಹಿತೆ
d. ಭಯೋತ್ಪಾದನಾ ನಿಗ್ರಹ ಕಾಯ್ದೆ
(1) c, a, d, b (2) a, d, b, c (3) d, b, c, a (4) b, a, d, c

75. ಕೇಂದ್ರ ಮಾಹಿತಿ ಆಯೋಗವನ್ನು ಕೇಂದ್ರ ಸರ್ಕಾರವು ಯಾವ ವರ್ಷ ಸ್ಥಾಪಿಸಿತು ?
(1) 2010 (2) 2005 (3) 2003 (4) 2001

76. ಈ ಕೆಳಗಿನವುಗಳಲ್ಲಿ ಯಾವುದು ಸಾರ್ವಜನಿಕ ವಲಯದ ಉದ್ದಿಮೆಗಳು, ವಿಮಾನ ನಿಲ್ದಾಣಗಳು ಮತ್ತು ಬಂದರುಗಳಿಗೆ ರಕ್ಷಣೆ ನೀಡುತ್ತದೆ ?
(1) CISF (2) RPF (3) BSF (4) CRPF

77. ಭಾರತದ ಸಂವಿಧಾನದ ಯಾವ ವಿಧಿಯ ಪ್ರಕಾರ ರಾಜ್ಯಪಾಲರು ರಾಜ್ಯ ಹಣಕಾಸು ಆಯೋಗವನ್ನು ನೇಮಕ ಮಾಡುತ್ತಾರೆ ?
(1) 242 ನೇ ವಿಧಿ (2) 241(1) ನೇ ವಿಧಿ (3) 240(1) ನೇ ವಿಧಿ (4) 243(1) ನೇ ವಿಧಿ


78. ಭಾರತದ ಸಂವಿಧಾನದ ಯಾವ ವಿಧಿಯ ಅನ್ವಯ ಭಾರತದ ರಾಷ್ಟ್ರಪತಿಗಳು 'ಸುಗ್ರೀವಾಜ್ಞೆ' ಘೋಷಿಸಬಹುದು ?
(1) 125 ನೇ ವಿಧಿ (2) 124 ನೇ ವಿಧಿ (3) 123 ನೇ ವಿಧಿ (4) 122 ನೇ ವಿಧಿ

79. ಕೇಂದ್ರದಲ್ಲಿ ಯಾವ ಆಯೋಗದ ವರದಿಯ ಪ್ರಕಾರ ಲೋಕಸೇವಾ ಆಯೋಗವನ್ನು ಸ್ಥಾಪಿಸಲಾಯಿತು ?
(1) ಲೀ ಆಯೋಗದ ವರದಿ, 1924 (2) ಸೆಕ್ರೆಟರಿಯೆಟ್ ಪ್ರೊಸಿಜರ್ ಸಮಿತಿ 1918
(3) ಮದ್ರಾಸ್ ಆಕ್ಟ್ 1884 (4) ವಿಕೇಂದ್ರೀಕರಣ ಆಯೋಗ 1909

ಕಚ್ಚಾ ಕಾರ್ಯಕ್ಕಾಗಿ ಸ್ಥಳ


www.prepp.in
Prepp Your Personal Exams Guide

80. ಆರೋಗ್ಯ ಸಚಿವಾಲಯದ ಒಂದು ಸಮೀಕ್ಷೆಯಲ್ಲಿ ಒಂದು ರಾಜ್ಯದ ವಿವಿಧ ಜಿಲ್ಲೆಗಳ HIV ಬಾಧಿತ ವ್ಯಕ್ತಿಗಳ ದತ್ತಾಂಶಗಳನ್ನು ಈ ಕೆಳಗಿನ ರೇಖಾ ನಕ್ಷೆಯಲ್ಲಿ ಸೂಚಿಸಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳ HIV ಬಾಧಿತ ವ್ಯಕ್ತಿಗಳ ಸರಾಸರಿ ಎಷ್ಟು ?




(1) 50 (2) 12 (3) 13 (4) 53

81. ಒಂದು ಪಟ್ಟಣದ ಜನರು ಆಡುವ ವಿವಿಧ ಆಟಗಳನ್ನು ಈ ಕೆಳಗಿನ ಪೈ ನಕ್ಷೆಯು ತೋರಿಸುತ್ತದೆ. ವಾಲಿಬಾಲ್‌ಗಿಂತ ಕ್ರಿಕೆಟ್ ಆಟವನ್ನು ಹೆಚ್ಚು ಆಡುವ ಶೇಕಡಾವಾರು ಜನ




(1) 40% (2) 50% (3) 30% (4) 25%

82. ಈ ಕೆಳಗಿನ ಯಾವ ದೇಶಗಳು ಸಂಯುಕ್ತ ಸರ್ಕಾರ ಪದ್ಧತಿಯನ್ನು ಹೊಂದಿವೆ ?

a. ಕೆನಡಾ b. ಜಪಾನ್ c. ಆಸ್ಟ್ರೇಲಿಯಾ d. ಬ್ರಿಟನ್

(1) b ಮತ್ತು d ಸರಿಯಾಗಿವೆ
(2) a ಮತ್ತು c ಸರಿಯಾಗಿವೆ
(3) b ಮತ್ತು c ಸರಿಯಾಗಿವೆ
(4) a ಮತ್ತು b ಸರಿಯಾಗಿವೆ

83. P, Q ಮತ್ತು R ಉದ್ದಿಮೆಯೊಂದರ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟಗಳನ್ನು 2 : 2 : 1 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ಸಂಸ್ಥೆಯು ವರ್ಷಾಂತ್ಯದಲ್ಲಿ ₹ 20,000 ಲಾಭ ಗಳಿಸಿದರೆ, P, Q ಮತ್ತು R ರ ಲಾಭದ ಪ್ರಮಾಣ ಅನುಕ್ರಮವಾಗಿ (ರೂಗಳಲ್ಲಿ) ಎಷ್ಟು ?

(1) 4000, 3000, 2000
(2) 8000, 8000, 4000
(3) 6000, 6000, 3000
(4) 8000, 6000, 4000

84. 65 ಶೇಕಡಾದ 25 ಶೇಕಡಾವನ್ನು ಕಂಡು ಹಿಡಿಯಿರಿ.

(1) 1.625 (2) 16.25 (3) 0.17 (4) 0.1625


ಕಚ್ಚಾ ಕಾರ್ಯಕ್ಕಾಗಿ ಸ್ಥಳ

www.prepp.in
Prepp
Your Personal Exams Guide

85. ಒಂದು ವೇಳೆ ಒಬ್ಬ ವ್ಯಕ್ತಿಯು ನೈರುತ್ಯವನ್ನು ಪೂರ್ವವೆಂದು, ವಾಯುವ್ಯವನ್ನು ದಕ್ಷಿಣವೆಂದು ಪರಿಭಾವಿಸಿದರೆ, ಅವನು ಪೂರ್ವದಿಕ್ಕನ್ನು ಏನೆಂದು ಕರೆಯಬಹುದು ?

(1) ನೈರುತ್ಯ (2) ಆಗ್ನೇಯ (3) ವಾಯುವ್ಯ (4) ಈಶಾನ್ಯ

86. ಎಷ್ಟು ವಿದ್ಯಾವಂತ ಜನರು ಉದ್ಯೋಗಸ್ಥರಾಗಿದ್ದಾರೆ ?




(1) 23 (2) 35 (3) 25 (4) 43

87. 7 ಪುರುಷರು ಮತ್ತು 5 ಮಹಿಳೆಯರ ಗುಂಪಿನಿಂದ ನಾಲ್ಕು ಪುರುಷರು ಹಾಗೂ ಇಬ್ಬರು ಮಹಿಳೆಯರನ್ನು ಒಳಗೊಂಡ 6 ಸದಸ್ಯರ ಸಮಿತಿಯನ್ನು ಎಷ್ಟು ರೀತಿಯಲ್ಲಿ ಆಯ್ಕೆ ಮಾಡಬಹುದು ?

(1) 325 (2) 380 (3) 350 (4) 300

88. ಒಂದು ಸಮಬಾಹು ತ್ರಿಭುಜದ ಎತ್ತರ 8 ಸೆ.ಮೀ ಆದರ ವಿಸ್ತೀರ್ಣ ಎಷ್ಟು ?

(1) 65 ಸೆ.ಮೀ$^2$ (2) $\frac{64}{\sqrt{3}}$ ಸೆ.ಮೀ$^2$ (3) 60 ಸೆ.ಮೀ$^2$ (4) $\frac{64}{3}$ ಸೆ.ಮೀ$^2$

89. ರಾಧಾ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಗಂಟೆಗೆ 70 ಕಿ.ಮೀ. ವೇಗದಲ್ಲಿ ಕಾರನ್ನು ಚಲಾಯಿಸಿಕೊಂಡು ಹೋಗುತ್ತಾಳೆ. ಹಾಗೂ ಗಂಟೆಗೆ 30 ಕಿ.ಮೀ. ವೇಗದಲ್ಲಿ ಹಿಂತಿರುಗುತ್ತಾಳೆ. ಕಾರಿನ ಸರಾಸರಿ ವೇಗವನ್ನು ಗುರುತಿಸಿ.

(1) ಗಂಟೆಗೆ 420 ಕಿ.ಮೀ (2) ಗಂಟೆಗೆ 210 ಕಿ.ಮೀ (3) ಗಂಟೆಗೆ 42 ಕಿ.ಮೀ (4) ಗಂಟೆಗೆ 21 ಕಿ.ಮೀ

90. ಇಂಗ್ಲೀಷ್ ವರ್ಣಮಾಲೆಯ ಎಡತುದಿಯ ಆರನೇ ಅಕ್ಷರದಿಂದ ಬಲಕ್ಕಿರುವ ಹದಿನಾಲ್ಕನೇ ಅಕ್ಷರ ಯಾವುದು ?

(1) T (2) W (3) P (4) R

91. ಕೊಟ್ಟಿರುವ ಆಯ್ಕೆಗಳಲ್ಲಿ ಗುಂಪಿಗೆ ಸೇರದ್ದನ್ನು ಕಂಡು ಹಿಡಿಯಿರಿ.

(1) CFJ (2) PRU (3) KNR (4) ADH


92. 25 ಜನ ಪುರುಷರು 100 ಮೀಟರ್ ಉದ್ದದ ಗೋಡೆಯನ್ನು 10 ದಿನಗಳಲ್ಲಿ ನಿರ್ಮಿಸಿದರೆ, 45 ಜನ ಪುರುಷರು 5 ದಿನಗಳಲ್ಲಿ ಅದೇ ರೀತಿಯ ಎಷ್ಟು ಉದ್ದದ ಗೋಡೆಯನ್ನು ನಿರ್ಮಿಸಬಹುದು ?

(1) 90 ಮೀಟರ್‌ಗಳು (2) 40 ಮೀಟರ್‌ಗಳು (3) 50 ಮೀಟರ್‌ಗಳು (4) 60 ಮೀಟರ್‌ಗಳು

93. 8 : 25 ಅನುಪಾತದ ಶೇಕಡಾವಾರು ಎಷ್ಟಕ್ಕೆ ಸರಿಸಮ ?

(1) 12% (2) 32% (3) 14% (4) 18%

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.prepp.in

Prepp
Your Personal Exams Guide

94. ಅನಿಲ ಸ್ಥಿತಿಯ ಗುಣಲಕ್ಷಣಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ I : ಅನಿಲಗಳು ಅತಿ ಹೆಚ್ಚು ಸಂಕುಚಿತಗೊಳ್ಳುತ್ತದೆ.

ಹೇಳಿಕೆ II : ಅನಿಲಗಳು ಎಲ್ಲ ದಿಕ್ಕುಗಳಲ್ಲಿಯೂ ಸಮವಾಗಿ ಒತ್ತಡವನ್ನು ಹೇರಬಲ್ಲವು.

ಈ ಕೆಳಗೆ ನೀಡಿರುವ ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) ಹೇಳಿಕೆ I ತಪ್ಪು, ಆದರೆ ಹೇಳಿಕೆ II ಸರಿಯಾಗಿದೆ.
(2) ಹೇಳಿಕೆ I ಸರಿ ಆದರೆ ಹೇಳಿಕೆ II ತಪ್ಪಾಗಿದೆ.
(3) ಹೇಳಿಕೆ I ಮತ್ತು ಹೇಳಿಕೆ II ಎರಡೂ ತಪ್ಪಾಗಿವೆ.
(4) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿಯಾಗಿವೆ.

95. ರಕ್ತದೊತ್ತಡವನ್ನು ಹೆಚ್ಚು ಮಾಡಲು ಬಳಸುವ ಸರಿಯಾದ ಹಾರ್ಮೋನ್ ಜೋಡಿಯು/ಗಳು

a. ಅಡ್ರಿನಾಲಿನ್ ಮತ್ತು ಎಫೆಡ್ರಿನ್
b. ಎಫೆಡ್ರಿನ್ ಮತ್ತು ಎಂಡ್ರೋಫಿನ್ಸ್
c. ಅಡ್ರಿನಾಲಿನ್ ಮತ್ತು ಎಂಡ್ರೋಫಿನ್ಸ್
d. ಎಂಡ್ರೋಫಿನ್ಸ್ ಮತ್ತು ಇನ್ಸುಲಿನ್

(1) d ಮಾತ್ರ
(2) c ಮತ್ತು d
(3) b ಮತ್ತು c
(4) a ಮಾತ್ರ

96. ಅತ್ಯಂತ ಪ್ರಬಲವಾದ, ತಾತ್ಕಾಲಿಕ ಕಾಂತವನ್ನು ತಯಾರಿಸಲು ಇರುವ ಪರಿಣಾಮಕಾರಿ ವಿಧಾನ ಯಾವುದು ?

(1) ವಿದ್ಯುತ್ಕಾಂತೀಯ ವಿಧಾನ
(2) ಭೂಮಿಯ ಕಾಂತಕ್ಷೇತ್ರದಲ್ಲಿ ಲೋಹವನ್ನು ಸುತ್ತಿಗೆಯಿಂದ ಹೊಡೆಯುವುದು.
(3) ದ್ವಿಮುಖ ಸ್ಪರ್ಶ ವಿಧಾನ
(4) ಏಕಸ್ಪರ್ಶ ವಿಧಾನ

97. ಶಬ್ದ ತರಂಗವು ಒಂದು ಮಾಧ್ಯಮದಿಂದ ಇನ್ನೊಂದು ಮಾಧ್ಯಮಕ್ಕೆ ಚಲಿಸಿದಾಗ, ಅದರ ಬದಲಾವಣೆಯಾಗದಿರುವ ಗುಣಲಕ್ಷಣವು

(1) ತರಂಗದೂರ
(2) ಪಾರ
(3) ಆವೃತ್ತಿ
(4) ಜವ/ವೇಗ

98. ಕನಿಷ್ಠ ಆವರ್ತನದೊಂದಿಗೆ ವಿದ್ಯುತ್ಕಾಂತೀಯ ವಿಕಿರಣವು __________.

(1) ಮೈಕ್ರೋವೇವ್‌ಗಳು
(2) ರೇಡಿಯೋ ತರಂಗಗಳು
(3) ಕ್ಷ-ಕಿರಣಗಳು
(4) ಕಾಸ್ಮಿಕ್ ಕಿರಣಗಳು

99. ಕೊಠಡಿಯ ಉಷ್ಣತೆಯಲ್ಲಿ, $H_2O$ ದ್ರವ ಸ್ಥಿತಿಯಲ್ಲಿ ಮತ್ತು $H_2S$ ಅನಿಲ ಸ್ಥಿತಿಯಲ್ಲಿರುತ್ತದೆ. ಏಕೆಂದರೆ,

(1) $H_2S$ ನಲ್ಲಿ ಅಣ್ವಾಂತರಿಕ ಹೈಡ್ರೋಜನ್ ಬಂಧವಿದೆ.
(2) $H_2S$ ನಲ್ಲಿ ಅಂತರಾಣ್ವಿಕ ಹೈಡ್ರೋಜನ್ ಬಂಧವಿದೆ.
(3) $H_2O$ ನಲ್ಲಿ ಅಂತರಾಣ್ವಿಕ ಹೈಡ್ರೋಜನ್ ಬಂಧವಿದೆ.
(4) $H_2O$ ನಲ್ಲಿ ಅಣ್ವಾಂತರಿಕ ಹೈಡ್ರೋಜನ್ ಬಂಧವಿದೆ.

100. ಇಟ್ಟಿಗೆಗಳು, ಹೆಂಚುಗಳು ಮತ್ತು ಒಳಚರಂಡಿ ಕೊಳವೆಗಳು ಯಾವ ಸೆರಾಮಿಕ್ ವರ್ಗದ ಅಡಿಯಲ್ಲಿ ಬರುತ್ತವೆ ?

(1) ರಚನಾತ್ಮಕ ಮಣ್ಣಿನ ಉತ್ಪನ್ನಗಳು
(2) ಬಿಳಿ ಮಣ್ಣಿನ ಪಾತ್ರೆಗಳು
(3) ವಕ್ರೀಭವನಕಾರಕಗಳು
(4) ಮಣ್ಣಿನ ಉತ್ಪನ್ನಗಳು

ಕಚ್ಚಾ ಕಾರ್ಯಕ್ಕಾಗಿ ಸ್ಥಳ